

ಈಶ್ವರ ಬಡಿಗೇರ

ಸುಬ್ಬಿ ಮಾಡಿ ಹಾಕುತ್ತಿದ್ದ ಬಗೆಬಗೆಯ ಪುಷ್ಕಳ ಭೋಜನದ ಪರಿಣಾಮದಿಂದ ಸುಬ್ಬಣ್ಣನ ಅರಗಿಸುವಿಕೆಯ ಶಕ್ತಿಯೂ ದಿನೇ ದಿನೇ ಪ್ರಖರವಾಗುವ ಬಿದಿಗೆಯ ಚಂದ್ರನಂತೆ ಹೆಚ್ಚುತ್ತಿತ್ತು! ಮದುವೆ, ಮುಂಜಿ ಮನೆಗಳಿಗೆ ಯಾರೇ ಕರೆದರೂ ತಪ್ಪದೇ ಧಾಂಗುಡಿಯಿಡುತ್ತಿದ್ದ ಸುಬ್ಬಣ್ಣನ ಭೋಜನಪ್ರಿಯತೆ ಆತನ ಅಕ್ಕಪಕ್ಕ ಕುಳಿತವರ ಹುಬ್ಬುಗಳನ್ನು ಹಾರಿಸುತ್ತಿತ್ತು! ಬಡಿಸುವವರು ಆತನೆದುರು ಸೋಲುತ್ತಿದ್ದರು. ಬಫೆಗಳಲ್ಲಿ ನಿಂತಾಗ ಸರತಿಯವರು ಈತನ ತಟ್ಟೆಯಲ್ಲಿ ಪೇರಿಸಿಟ್ಟುಕೊಂಡ ಹೋಳಿಗೆಗಳನ್ನು ನೋಡಿ ಕಿಸಿಕಿಸಿ ನಗತೊಡಗಿದ್ದರು. ಆಗೆಲ್ಲಾ ಸುಬ್ಬಣ್ಣನಿಗೆ ಮುಜುಗರವಾಗುತ್ತಿತ್ತಾದರೂ ಬೇರೊಂದು ರೀತಿಯಲ್ಲಿ ಆತ ಬೀಗುತ್ತಿದ್ದ. ತನ್ನ ಓರಗೆಯವರು ಒಂದಕ್ಕಿಂತ ಜಾಸ್ತಿ ತಿನ್ನಲಾಗದೇ ಒದ್ದಾಡುವಾಗ ತಾನು ಎಂಟ್ಹತ್ತು ಹೋಳಿಗೆ, ಜಿಲೇಬಿಗಳನ್ನು ಭುಂಜಿಸಿ, ಸುಖವಾಗಿ ಜೀರ್ಣಿಸಿ ಕೊಳ್ಳುವುದು ತನ್ನ ವಿಶೇಷತೆಯೆಂದು ಅಂದುಕೊಳ್ಳತೊಡಗಿದ. ಕೆಲವೊಮ್ಮೆ ತಿನ್ನುವ ಭರದಲ್ಲಿ ಉದರದ ಕೆಪ್ಯಾಸಿಟಿಯನ್ನೂ ಅಲಕ್ಷಿಸಿ ತಿಂದು ಮನೆಗೆ ಮರಳಿದೊಡನೆ ಢರ್ರೋ.. ಢುಸ್ಸೋ... ಎಂದು ತಾಸುಗಟ್ಟಲೇ ತೇಗುತ್ತಿದ್ದ. ಆಗೆಲ್ಲಾ ವ್ಯಂಗ್ಯ ನೋಟದೊಂದಿಗಿರುತ್ತಿದ್ದ ಸುಬ್ಬಿಯನ್ನುದ್ದೇಶಿಸಿ 'ಓಯ್! ನಾನು ಊಟಕ್ಕೆಲ್ಲಾ ನಾಚದಿಲ್ಲಪ್ಪಾ, ನಾಚ್ಕೂಬಾರ್ದು. ನಾನು ಫಂಕ್ಷನ್‌ಗಳಿಗೆ ಹೋಗೋದೇ ಊಟಕ್ಕೆ. ನನ್ನ ವಾರಗೆಯವರು ಇಷ್ಟು ತಿನ್ತಾರಾ? ಅವರಿಗೆ ಆ ಕೆಪ್ಯಾಸಿಟಿ ಇಲ್ಲಾ. ನಾನ್ನೋಡು? ಎಷ್ಟೆಲ್ಲಾ ತಿನ್ನಬಲ್ಲೆ! ಆದ್ರೂ ಡಯಾಬಿಟಿಸ್, ಬೊಜ್ಜು ಏನೂ ಇಲ್ಲಾ. ಏನೂ ಆಗಲ್ಲಾ. ಗ್ಯಾಸು, ಹಾಳಾದ್ದು ಊಟ ಮಾಡ್ತಾಗ ಹೊಟ್ಟೆಯೊಳಗೆ ಸೇರ್ಕೊಂಬಿಟ್ಟಿದೆ. ಅದು ಹೊರಗೆ ಹೋದ್ರೆ ಸರೀ ಹೋಗ್ತದೆ ಬಿಡು. ಎಲ್ಲಿ? ಸ್ವಲ್ಪ ಮಜ್ಜಿಗೆ ಬೆರೆಸಿ ಕೊಡು ನೋಡಣ?' ಎಂದು ಹೆಮ್ಮೆಯಿಂದ ಹೇಳುತ್ತಿದ್ದ. ಹಗಲಿಲ್ಲಾ, ರಾತ್ರಿಯಿಲ್ಲಾ, ಹಲವಾರು ಬಾರಿ ಸುಬ್ಬಣ್ಣನಿಗೆ ಇಂಗು ಬೆರೆಸಿದ ತೆಳು ಮಜ್ಜಿಗೆ ಮಾಡಿಕೊಟ್ಟು ಸಾಕಾಗಿ ಹೋಗಿದ್ದ ಸುಬ್ಬಿ ತುಟಿ ಕೊಂಕಿಸಿ 'ಹ್ಞಾಂ ಹ್ಞಾಂ, ಇನ್ನೂ ತಿನ್ಬೇಕಿತ್ತು. ಆ ಗುಡಾಣದಂತಾ ಹೊಟ್ಟೆ ಒಡ್ದು ಹೋಗಿದ್ರೆ ನಿಮ್ಗೆ ಸರೀ ಆಗ್ತಿತ್ತು. ತಿನ್ನಿಕ್ಕೂ ಲಿಮಿಟ್ ಇಲ್ವಾ? ಯಾರು ಏನು ಅಂದ್ಕೊಳ್ಳಿಕ್ಕಿಲ್ಲಾ? ಸಿಕ್ಕಿದ್ದೆಲ್ಲಾ ತಿನ್ತೀರಾ' ಎಂದೆಲ್ಲಾ ಮೂದಲಿಸುತ್ತಿದ್ದಳು. ಆ ಹೊತ್ತಿಗೆ ಸುಬ್ಬಣ್ಣನಿಗೆ ಆಕೆಯ ಮಾತು ಹೌದೆಂದು ಅನ್ನಿಸಿದರೂ ಮುಂದಿನ ಕೆಲವೇ ದಿನಗಳಲ್ಲಿ ಈ ದೃಶ್ಯ ರಿಪೀಟ್ ಆಗುತ್ತಿತ್ತು.

ಹೀಗೆ ತನ್ನ ಈ ಹೊಟ್ಟೆಬಾಕತನದ ಬಗ್ಗೆಯೇ ಹೆಮ್ಮೆಯಿಟ್ಟುಕೊಂಡು, ತನ್ನಂತೆ ಯಾರೂ ಊಟ ತಿಂಡಿ ಮಾಡರು ಎಂದು ಬೀಗುತ್ತಿದ್ದ ಸುಬ್ಬಣ್ಣನಂತಹ ಸುಬ್ಬಣ್ಣನನ್ನೂ ತಿನ್ನುವ ವಿಷಯದಲ್ಲಿ ಅವನ ಅಖಾಡೆಯಲ್ಲೇ ಮೀರಿಸಿದವರು ಸುಬ್ಬಿಯ ಕೊಲೀಗುಗಳಾದ ನವತರುಣಿಯರು ಎಂಬುದರಲ್ಲಿಯೇ ವಿಶೇಷವಿರುವುದು. ಆ ಘಟನೆಗೆ ಮುಹೂರ್ತ ಏರ್ಪಟ್ಟಿದ್ದು ಮೊನ್ನೆಯ ದಸರಾ ರಜೆಯಲ್ಲಿ. ಸುಬ್ಬಣ್ಣನ ಮನೆಯಲ್ಲಿ ಗಣಪತಿಯನ್ನು ವರ್ಷವೂ ತಪ್ಪದೇ ಭಾದ್ರಪದ ಚೌತಿಯ ಸಂದರ್ಭದಲ್ಲಿ ಕೂರಿಸುತ್ತಿದ್ದರು. ಈ ವರ್ಷ ಚೌತಿಯ ಸಮಯದಲ್ಲಿ ಸುಬ್ಬಣ್ಣನ ಚಿಕ್ಕಪ್ಪ ತೀರಿ ಹೋಗಿದ್ದರಿಂದ ಆವರಿಸಿದ ಸೂತಕದ ಪರಿಣಾಮವಾಗಿ ಗಣಪತಿಯನ್ನು ನವರಾತ್ರಿಯ ಚವತಿಯಲ್ಲಿ ಕೂರಿಸಿದ್ದರು. ನೈವೇದ್ಯಕ್ಕಾಗಿ ಸಾಕಷ್ಟು ಚಕ್ಕುಲಿ, ಮೋದಕ, ಕಡುಬು, ಪಾಯಸಗಳೆಲ್ಲವೂ ದೊಡ್ಡ ದೊಡ್ಡ ಪಾತ್ರೆಗಳಲ್ಲಿ ತಯಾರಾಗಿದ್ದವು. ಹಬ್ಬದಾಚರಣೆಗಾಗಿ ರಜೆಯನ್ನು ಹಾಕಿದ್ದ ಸುಬ್ಬಣ್ಣನು ಮಧ್ಯಾಹ್ನದ ಪೂಜೆಯ ನಂತರ ಸಮಯವನ್ನು ವ್ಯರ್ಥ ಮಾಡದೇ ಯಥಾನುಶಕ್ತಿ ಗಣಪತಿಯ ಪ್ರಸಾದವನ್ನು ಭುಂಜಿಸಿ, ಸಣ್ಣ ನಿದ್ದೆಯನ್ನು ತೆಗೆದ. ಸಂಜೆಯ ಸಮಯದಲ್ಲಿ ಸುಬ್ಬಿಯ ಮೂವರು ಸಹೋದ್ಯೋಗಿಗಳು ಗಣಪತಿಯನ್ನು ನೋಡುವ ನೆವದಿಂದ ಇವರ ಮನೆಗೆ ಬಂದರು. ಹರಿಣಿ, ಛಾಯಾ ಮತ್ತು ಭಾಮಾ ಎಂಬ ಆ ಮೂವರು ಕನ್ಯಾಮಣಿಗಳೇ ಸುಬ್ಬಣ್ಣನ ಗರ್ವಭಂಗ ಮಾಡಿದವರು! ನೋಡಲು ಎಲ್ಲರೂ ಸಣ್ಣ ಕಾಯದವರೇ. ಹಾಸ್ಟೇಲಿನಲ್ಲಿ ಮೇಲ್ವಿಚಾರಕರಾಗಿಯೂ, ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿಯೂ ಎರಡೆರಡು ಕೆಲಸಗಳನ್ನು ಅವರೆಲ್ಲಾ ಮಾಡುತ್ತಿದ್ದರು. ಹಾಸ್ಟೇಲಿನ ಮೇಲ್ವಿಚಾರಿಕೆಯ ಹೆಚ್ಚುವರಿ ಜವಾಬ್ದಾರಿಗಾಗಿ ಮತ್ತು ಇನ್ನೂ ಅವಿವಾಹಿತರಾಗಿದ್ದ ಕಾರಣ ಹಾಸ್ಟೇಲಿನಲ್ಲಿ ಅವರಿಗೆ ಊಟ ವಸತಿಗಳೆಲ್ಲಾ ಉಚಿತವಾಗಿದ್ದವು.

ಅವರೆಲ್ಲಾ ಬಂದವರೇ ಸುಬ್ಬಿಗೆ ಮಾತ್ರ ಕೇಳುವಂತೆ 'ಮ್ಯಾಡಮ್! ಗಣಪತಿ ನೋಡೋದು ಒಂದು ನೆವ ಅಷ್ಟೆ. ನಮಗೆ ಹಾಸ್ಟೆಲ್ ಊಟ ತಿಂಡಿ ಮಾಡಿ, ಮಾಡಿ ಸಾಕಾಗಿ ಹೋಗಿದೆ. ಹಾಗಾಗಿ ನಿಮ್ಮ ಕೈ ರುಚಿ ನೋಡ್ಲಿಕ್ಕೇ ಇಲ್ಲಿಗೆ ಬಂದಿರೋದು' ಎಂದರು. ಅವರೊಟ್ಟಿಗೆ ಕಿಸಿಕಿಸಿ ನಗುತ್ತಾ ಸುಬ್ಬಿಯು ಅಯ್ಯೋ ಪರ್ವಾಗಿಲ್ಲಾ ರೀ, ಪಾಪ! ಎಷ್ಟು ದಿನದಿಂದ ನಿಮಗೆ ಸರಿಯಾಗಿ ಮನೆಯೂಟ ಸಿಗ್ಲಿಲ್ವೇನೋ? ತೊಂದ್ರೆ ಇಲ್ಲಪ್ಪಾ, ಹೊಟ್ಟೆ ತುಂಬಾ ತಿನ್ನಿ. ಮೂರು ಜನ ಸೇರಿ ಎಷ್ಟು ತಿಂತೀರಾ ಅಂತಾ ನಾನೂ ನೋಡೇ ಬಿಡ್ತೀನಿ ಎಂದಳು. ಸರಿ, ಗಣಪತಿಗೆ ಅವರೆಲ್ಲಾ ನಮಸ್ಕಾರ ಮಾಡಿದ್ದಾಯಿತು. ಮೂರ್ತಿಯೆದುರಿಗಿದ್ದ ಪಂಚಾಮೃತವನ್ನು ಮುಗಿಸಿದ್ದಾಯಿತು, ಎರಡೆರಡು ಬಾಳೆಹಣ್ಣುಗಳನ್ನು ಹೊಟ್ಟೆಗಿಳಿಸಿದ್ದಾಯಿತು. ಮುಂದೆ ಶುರುವಾಯಿತು ನೋಡಿ ಆ ಮೂವರು ಕನ್ಯಾಮಣಿಗಳ ಬ್ಯಾಟಿಂಗು!

ಸುಬ್ಬಿ ತನ್ನ ಮದುವೆಯಲ್ಲಿ ಉಡುಗೊರೆಯಾಗಿ ಬಂದಿದ್ದ ಮಿರಮಿರ ಮಿಂಚುವ ಮೆಲಮೈನ್ ತಟ್ಟೆಗಳನ್ನು ಸುಬ್ಬಣ್ಣನಿಗೆ ಹೇಳಿ ಅಟ್ಟದಿಂದ ತೆಗೆಸಿದಳು. ಅದರಲ್ಲಿ, ಮಧ್ಯಾಹ್ನ ಮಾಡಿದ್ದ ಸಣ್ಣ ಬಟ್ಟಲಿನಾಕಾರದ ನಾಲ್ಕು ಕಡುಬು, ಎರಡು ಚಕ್ಕುಲಿ, ಒಂದು ಮೋದಕ, ಕಡುಬಿಗೆ ಸಾಕಷ್ಟು ತುಪ್ಪವನ್ನು ಸುರುವಿ ಅವರೆದುರಿಗೆ ಇರಿಸಿದಳು. ಅದೂ ಇದೂ ಮಾತನಾಡುತ್ತಾ ಸುಮಾರು ಅರ್ಧ ಘಂಟೆ ಹ್ಯಾಗೋ ಕಳೆದೇ ಹೋಯಿತು. ಮಾತಿನ ಭರದಲ್ಲಿ ಬಡಿಸುವುದನ್ನೇ ಮರೆತಿದ್ದನ್ನು ನೆನಪಿಸುವಂತೆ ಹರಿಣಿಯು ಸುಬ್ಬಿಯನ್ನುದ್ದೇಶಿಸಿ, ಸಾವಕಾಶವಾಗಿ 'ಮ್ಯಾಡಮ್, ಕಡ್ಬು ತುಂಬಾ ಚೆನ್ನಾಗಾಗಿದೆ, ಚಕ್ಲಿಯಂತೂ ಅದ್ಭುತ, ಬಾಯಲ್ಲಿಟ್ರೆ ಕರ್ಗಿ ಹೋಗ್ತಿದೆ. ಇನ್ನು ನೀವು ಮಾಡಿರೋ ಮೋದಕವಂತೂ ಆಹ್..! ಪಾಕದಲ್ಲಿ ಹದವಾಗಿ ಬೆರೆತು ನೆನ್ಸಿಕೊಂಡ್ರೆ ಬಾಯಲ್ಲಿ ನೀರು ಬರ್ತದೆ ಎಂದು ತಾವು ಬಂದಿದ್ದೇಕೆಂದು ಪರೋಕ್ಷವಾಗಿ ಅರುಹಿದಳು. ಪೂರಿಯಂತೆ ಉಬ್ಬಿದ ಸುಬ್ಬಿಯು ತಕ್ಷಣ ಹೆಮ್ಮೆಯಿಂದ ಹೌದೇನೇ ಹರಿಣಿ? ಅಷ್ಟು ಚೆನ್ನಾಗಿ ಆಗಿದ್ಯಾ? ನಮ್ಮೆಜಮಾನ್ರು ಏನೂ ಹೇಳ್ಲೇ ಇಲ್ಲಾ ನೋಡೇ? ಸುಮ್ಮನೇ ತಿನ್ನೋದೊಂದೇ ಮಾಡಿದ್ರು. ತಡೀ..ತಡೀ.. ಇನ್ನೂ ತರಲಾ ಹಾಗಾದ್ರೆ? ಎಂದಳು. ಯಾವಾಗ ಸುಬ್ಬಿಯ ಗ್ರೀನ್ ಸಿಗ್ನಲ್ ಸಿಕ್ಕಿತೋ, ಹರಿಣಿಯೊಂದಿಗೆ ಛಾಯಾ ಮತ್ತು ಭಾಮೆಯರೂ ಕೂಡಲೇ ತಲೆಯಲ್ಲಾಡಿಸಿದರು.

ಎರಡನೆಯ ಸಾರಿ ಒಂದೊಂದು ಮೋದಕ, ಚಕ್ಕುಲಿ ಹಾಗೂ ಎರಡೆರಡು ಕಡುಬುಗಳನ್ನು ಬಡಿಸಿದಳು ಸುಬ್ಬಿ. ಒಂದೇ ನಿಮಿಷದಲ್ಲಿ ಖಾಲಿ ತಟ್ಟೆ ಅವರೆದುರಿಗಿತ್ತು. ಸುಬ್ಬ ಸುಬ್ಬಿಯ ಆತಿಥ್ಯಕ್ಕೆ ಆ ಹೊತ್ತಿಗೆ ಒಗ್ಗಿ ಹೋಗಿದ್ದ ಹರಿಣಿಯು ಮತ್ತೊಮ್ಮೆ ಭಿಡೆಯಿಲ್ಲದೇ 'ಮ್ಯಾಡಮ್! ತಟ್ಟೆ ಖಾಲಿ, ನೀವು ಬೇಜಾರು ಮಾಡ್ಕೊಳಲ್ಲಾ ಅಂದ್ರೆ ಇನ್ನೂ ಬಡಿಸ್ತೀರಾ? ನಂಗಂತೂ ಕಡ್ಬು